ಶ್ರೀ ಎಂ.ಸಿ. ಮನಗೋಳಿ : ಮಾನ್ಯ ಅಧ್ಯಕ್ಷರೆ, ಸದರಿ ಯೋಜನೆಗೆ ಐವತ್ತೆರಡು ಕೋಟಿ ರೂಪಾಯಿಗಳು ಮಂಜೂರು ಆಗಿರುವಂಥಾದ್ದು ಇದೆ. ಈಗಾಗಲೇ ಇಪ್ಪತ್ತೆರಡು ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಐವತ್ತೆರಡು ಕೋಟಿ ರೂಪಾಯಿಗಳ ಹಣದಲ್ಲಿ ಧಾರವಾಡ ಜಿಲ್ಲೆಯಲ್ಲಿ ಇಪ್ಪತ್ತು ಹಳ್ಳಿಗಳು, ಬಿಜಾಪುರದಲ್ಲಿ ಹದಿನಾಲ್ಕು ಹಳ್ಳಿಗಳನ್ನು ಈ ಯೋಜನೆಯಲ್ಲಿ ಅಳವಡಿಸಲಾಗಿದೆ. ವಿವಿಧ ಹಂತಗಳಲ್ಲಿ ಈ ಕೆಲಸ ಪ್ರಗತಿಯಲ್ಲಿದೆ ಎಂದು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ಪಾಟೀಲ ಶಿವಾನಂದ ಸಿದ್ರಾಮಪ್ಪ : ಮಾನ್ಯ ಅಧ್ಯಕ್ಷರೆ, ಈ ಯೋಜನೆಗೆ ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಗಳು ಇತ್ತು. ಇದು ಈಗ ರಿವೈಸ್ ಆಗಿ ಹೆಚ್ಚಿಗೆ ಆಗಿದೆ ಎಂದು ಕೇಳಿದ್ದೇನೆ. ಇದರ ಬಗ್ಗೆ ಅಲ್ಲಿ ಕೇಳೋಣವೆಂದರೆ ಅಧಿಕಾರಿಗಳು ಇಲ್ಲ. ಇದಕ್ಕೆ ಸಂಬಂಧಪಟ್ಟ ಹಾಗೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಧಾರವಾಡದಲ್ಲಿ ಇದ್ದಾರೆ. ಈ ಯೋಜನೆಯಲ್ಲಿ ಬಿಜಾಪುರಕ್ಕೆ ಮೂವತ್ತು ಕೋಟಿ ರೂಪಾಯಿಗಳನ್ನು ಅಂದಾಜು ಮಾಡುವಂಥಾದ್ದು, ಇಲ್ಲಿ ಒಬ್ಬ ಎಕ್ಸಿಕ್ಯೂಟೀವ್ ಇಂಜಿನಿಯರ್ ಇದ್ದಾರೆ, ಒಬ್ಬ ಜೂನಿಯರ್ ಇಂಜಿನಿಯರ್ ಇದ್ದಾರೆ. ಇವರೂ ಸಹ ಬಿಜಾಪುರದಲ್ಲಿ ಇರುವುದಿಲ್ಲ, ಧಾರವಾಡದಿಂದ ಬಂದು ಹೋಗುತ್ತಾರೆ. ಇದನ್ನು1996ರಲ್ಲೇ ಮುಗಿಸುತ್ತೇವೆಂದು ಮಾನ್ಯ ಮಂತ್ರಿಯವರಾದ ಎಂ.ಪಿ. ಪ್ರಕಾಶ್‌ರವರು ಹೇಳಿದ್ದರು, ಪುನಃ 1996ರಲ್ಲಿ ಮುಗಿಸುತ್ತೇವೆಂದು ಹೇಳುತ್ತಿದ್ದಾರೆ. ಆದುದರಿಂದ ತಾವು ದಯಮಾಡಿ ಬಿಜಾಪುರಕ್ಕೆ ಎಕ್ಸಿಕ್ಯೂಟೀವ್ ಇಂಜಿನಿಯರ್ ಅನ್ನು ಅಥವಾ ಒಬ್ಬ ರೆಸ್ಪಾನ್ಸಿಬಲ್ ಆಫೀಸರ್ಸ್ ಅನ್ನು ಕೊಡುವುದಕ್ಕೆ ಆಗುವುದಾದರೆ ಈ ಕೆಲಸ ಸರಿಯಾಗಿ ಆಗುತ್ತದೆ.

ಶ್ರೀ ಎಂ.ಸಿ. ಮನಗೋಳಿ : ಮಾನ್ಯ ಅಧ್ಯಕ್ಷರೆ, ಈ ಯೋಜನೆ ಮಂದಗತಿಯಲ್ಲಿ ಆಗುತ್ತಿರುವುದನ್ನು ಕಂಡು ಈಗ ಮುಂದಿನ ಕೆಲಸವನ್ನು ಲ್ಯಾಂಡ್ ಆರ್ಮಿಯವರಿಗೆ ವಹಿಸಿ ಕೊಟ್ಟಿದ್ದೇವೆ.

ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಒಳಚರಂಡಿ ವ್ಯವಸ್ಥೆ

394 - ಶ್ರೀ ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಒಳಚರಂಡಿ ಯೋಜನೆಯು ತೀರ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅದನ್ನು ಸುಧಾರಿಸಲು ಕೈಕೊಳ್ಳಲಾದ ಕ್ರಮವೇನು? ಇದಕ್ಕೆ ತಗಲುವ ವೆಚ್ಚವೆಷ್ಟು? (ಮಾಡುವ ಕಾಮಗಾರಿಗಳ ಪೂರ್ತಿ ವಿವರ ತಿಳಿಸಿರುವುದು)

ಇ) ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಕಳೆದ 4 ವರ್ಷಗಳಲ್ಲಿ ಸಂಗ್ರಹವಾದ ಡ್ರೈನೇಜ್ ಸೆಸ್ ಎಷ್ಟು? ಅದನ್ನು ಯಾವ ಕಾಮಗಾರಿಗಳಿಗೆ ಉಪಯೋಗಿಸಲಾಗಿದೆ? (ಕಾಮಗಾರಿಗಳ ಪೂರ್ತಿ ವಿವರ ಹಾಗೂ ತಗಲಿದ ಖರ್ಚಿನ ವಿವರ ತಿಳಿಸುವುದು)

ಈ) ಅದರಲ್ಲಿ ಖರ್ಚಾಗದೆ ಉಳಿದಿರುವ ಡ್ರೈನೇಜ್ ಸೆಸ್ ಎಷ್ಟು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಬಂದಿದೆ.

ಆ) ಕರ್ನಾಟಕ ಕೋಸ್ಟಲ್ ಎನ್‌ವೈರ್ನಮೆಂಟ್ ಮ್ಯಾನೇಜ್‌ಮೆಂಟ್ ಪ್ಲಾನ್ ಮುಖಾಂತರ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಅನುದಾನ ಪಡೆದುಕೊಂಡು ಮಂಗಳೂರು ನಗರದ ಒಳಚರಂಡಿ ವ್ಯವಸ್ಥೆಯನ್ನು ಮೇಲ್ದರ್ಜೆಗೆ ತರಲು ಪ್ರಯತ್ನಿಸಲಾಗುತ್ತದೆ. 39.10 ಕೋಟಿಗಳಿಗೆ ಎ.ಡಿ.ಬಿ. ಅನುದಾನಕ್ಕೆ ಮಂಜೂರಾತಿ ದೊರಕಿದ್ದು 2 ಶುದ್ಧೀಕರಣ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಿ (ದ್ವಿತೀಯ ಹಂತದ ಶುದ್ಧೀಕರಣ ಕೇಂದ್ರ) ನಗರದ ತಗ್ಗು ಪ್ರದೇಶಗಳ ಹಾಲಿ ಒಳಚರಂಡಿ ಕೊಳವೆಗಳನ್ನು ತೆಗೆದು ಸೂಕ್ತ ಹೆಚ್ಚುವರಿ ವ್ಯಾಸದ ಕೊಳವೆಯನ್ನು ಅಳವಡಿಸುವುದು.

ಇ) ಒಟ್ಟು ರೂ. 4,82,81,221.00 ಸಂಗ್ರಹವಾಗಿರುತ್ತದೆ. ಅದನ್ನು ಉಪಯೋಗಿಸಿದ ಕಾಮಗಾರಿಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ಈ) ರೂ. 1,98,80,000.00 ಗಳು.

ಅನುಬಂಧ

ಕ್ರಮ ಸಂಖ್ಯೆ	ಕೆಲಸಗಳ ವಿವರ	ಮೊಬಲಗು ರೂ.
1.	ಕುದ್ರೋಳಿ ರೆಹಮತ್ ನಗರದಲ್ಲಿ ಒಳಚರಂಡಿ ವಿಸ್ತರಣೆ ಕೆಲಸ	33,500.00
2.	ಕುದ್ರೋಳಿ ಸಾರ್ವಜನಿಕ ಬಾವಿಯ ಒಳಚರಂಡಿ ವಿಸ್ತರಣೆ	45,000.00
3.	ಟೆಲಿಕಾಂ ರಸ್ತೆಯಲ್ಲಿ ಕು.ನಂ. 19-1-112:13 ಬಳಿ ಒಳಚರಂಡಿ ವಿಸ್ತರಣೆ	51,000.00
4.	ಮಾರಪ್ಪ ಲೇನ್‌ನಲ್ಲಿ ಒಳಚರಂಡಿ ವಿಸ್ತರಣೆ	70,000.00
5.	ಕಂಕನಾಡಿ ಕುದ್ಕೋರಿ ಗುಡ್ಡೆ ಬಳಿ ಒಳಚರಂಡಿ ವಿಸ್ತರಣೆ	70,000.00
6.	ಸುಲ್ತಾನ್ ಬೆತ್ತೇರಿ ಮನೆ ನಂಬ್ರ 7.1.137:6 ರ ಬಳಿ ಒಳಚರಂಡಿ ವಿಸ್ತರಣೆ	65,000.00
7.	ಬಿಜೈ ಕಾಪಿಕಾಡು ಬಳಿ ಮನೆ ನಂಬ್ರ 2.7.503 ಇಲ್ಲಿಂದ 2.7.503:3ರ ವರೆಗೆ ಒಳಚರಂಡಿ ವಿಸ್ತರಣೆ	67,000.00
8.	ಬಿಜೈ ಕಾಪಿಕಾಡು ಬಳಿ ಮನೆ ನಂಬ್ರ 2.9.519:7 ಇಲ್ಲಿಂದ 2.7.503:1ರ ವರೆಗೆ ಒಳಚರಂಡಿ ವಿಸ್ತರಣೆ	61,500.00
9.	ಬಿಜೈ ಕಾಪಿಕಾಡು ಶಿರೋಡಿಯನ್ ಲೇನ್ ಬಳಿ ಒಳಚರಂಡಿ ವಿಸ್ತರಣೆ	53,500.00
10.	ಕದ್ರಿ ಬಿ ಗ್ರಾಮದ ಎಡ ಪ್ರದೇಶದಲ್ಲಿ ಒಳಚರಂಡಿ ವಿಸ್ತರಣೆ	85,000.00

1	2	3
11.	ಬಿಜ್ಜೆ ನ್ಯೂ ರೋಡ್‌ನಲ್ಲಿ ಕಾಸಾಬೆಲ್ಲಾ ಅಪಾರ್ಟ್‌ಮೆಂಟ್ ಬಳಿ ಒಳಚರಂಡಿ ವಿಸ್ತರಣೆ	75,000.00
12.	ಅತ್ತಾವರ 6ನೇ ಅಡ್ಡ ರಸ್ತೆಯಲ್ಲಿ ಒಳಚರಂಡಿ ವಿಸ್ತರಣೆ	79,000.00
13.	ಬಿಜ್ಜೆ ಕಾಪಿಕಾಡುವಿನಲ್ಲಿ ಮ.ನಂ. 2-519:1ರ ಬಳಿ ಒಳಚರಂಡಿ ವಿಸ್ತರಣೆ	99,000.00
14.	ಸೂಟರ್ ಪೇಟೆ ಮ.ನಂ. 1-14ರ ಬಳಿ ಒಳಚರಂಡಿ ವಿಸ್ತರಣೆ	25,000.00
15.	ಲೋವರ್ ಬೆಂದೂರು 3ನೇ ಅಡ್ಡ ರಸ್ತೆಯಲ್ಲಿ ಮ.ನಂ. 15-17-917ರ ಬಳಿ ಒಳಚರಂಡಿ ವಿಸ್ತರಣೆ	30,000.00
16.	ಕದ್ರಿ ಕಂಬ್ಳಾದಲ್ಲಿ ಮ.ನಂ. 3.3.191ರ ತನಕ ಒಳಚರಂಡಿ ವಿಸ್ತರಣೆ	41,200.00
17.	ಮಂಕಿಸ್ಟಾಂಡ್ ಪಂಡಿತ್ ನಿಲಯದ ಬಳಿ ಒಳಚರಂಡಿ ವಿಸ್ತರಣೆ	86,000.00
18.	ಅತ್ತಾವರ ಬಾಬು ಗುಡ್ಡ ಮ.ನಂ. 24.5.328:2 ಒಳಚರಂಡಿ ವಿಸ್ತರಣೆ	35,000.00
19.	ಜೋಸೆಫ್ ನಗರದಲ್ಲಿ ಮ.ನಂ. 17-6-50ರ ಒಳಚರಂಡಿ ವಿಸ್ತರಣೆ	44,000.00
20.	ನಂದಿಗುಡ್ಡ ಮುಖ್ಯ ರಸ್ತೆಯಲ್ಲಿ ಮ.ನಂ. 17.6.246 ಒಳಚರಂಡಿ ವಿಸ್ತರಣೆ	40,000.00
21.	ಜೆಪ್ಪು ಬಪ್ಪಾಲ್ ಯಂತ್ರಸ್ಥಾವರ 7ರ ಬಳಿ ಒಳಚರಂಡಿ ವಿಸ್ತರಣೆ	41,000.00
22.	ಉರ್ವಸ್ಟೋರ್ ಬಳಿ ಮ.ನಂ. 1.1.52:1ರಿಂದ ಪ್ರೀತಿಬಾರ್‌ವರೆಗೆ ಒಳಚರಂಡಿ ವಿಸ್ತರಣೆ	90,000.00
23.	ಅಶೋಕನಗರ ಕೋಡಂಬ್ಬು ದೇವಸ್ಥಾನ ಬಳಿ ಒಳಚರಂಡಿ ವಿಸ್ತರಣೆ	46,000.00
24.	ಉರ್ವಸ್ಟೋರ್ ಮ.ನಂ. 133-27-80 ಒಳಚರಂಡಿ ವಿಸ್ತರಣೆ	41,000.00
25.	ದೋಗು ಕೊಟ್ಟಾರಿ ಕಾಂಪೌಂಡು ಬಳಿ ಒಳಚರಂಡಿ ವಿಸ್ತರಣೆ	75,000.00
26.	ಮಂಕಿಸ್ಟಾಂಡ್ ಮಂಗಳಾ ಫೆಬ್ರಿಕೇಶನ್ ಬಳಿ ಹೆಚ್ಚುವರಿ ವ್ಯಾಸದ ಕೊಳವೆ	42,000.00
27.	ಫಳ್ನೀರ್ ಡೆಲ್ಟಾ ಕೋರ್ಟ್ ಬಳಿ ಒಳಚರಂಡಿ ಸ್ಥಳಾಂತರಿಸುವುದು	45,000.00
28.	ಬೆಂದೂರು 2ನೇ ಅಡ್ಡ ರಸ್ತೆಯಲ್ಲಿ ಒಳಚರಂಡಿ ವಿಸ್ತರಣೆ	41,000.00
29.	ಜೆಪ್ಪು ಮಾರ್ಕೆಟ್ ಕೀರ್ತಿ ನಿಲಯ ತನಕ ಒಳಚರಂಡಿ ವಿಸ್ತರಣೆ	99,500.00
30.	ಬೊಳಾರ ವಿಶ್ವೇಶ್ವರ ಭಜನಾ ಮಂದಿರ ಬಳಿ ಒಳಚರಂಡಿ ವಿಸ್ತರಣೆ	83,000.00
31.	ಮಾರ್ಗನ್ಸ್ ಗೇಟ್ ಪಿ.ಎಲ್. ಪ್ಯಾಕ್ಟರಿ ಬಳಿ ಒಳಚರಂಡಿ ವಿಸ್ತರಣೆ	75,000.00
32.	ಸುಭಾಷನಗರ 1ನೇ ಅಡ್ಡ ರಸ್ತೆಯಲ್ಲಿ ಒಳಚರಂಡಿ ವಿಸ್ತರಣೆ	43,000.00
33.	ಸರ್ಕಾರಿ ಮಹಿಳಾ ಕಾಲೇಜ್ ಬಳಿ ಒಳಚರಂಡಿ ದುರಸ್ತಿ	22,000.00

1	2	3
34.	ಸುಲ್ತಾನ್ ಬತ್ತೇರಿ ಜಾರಂದಾಯ ದೇವಸ್ಥಾನ ರಸ್ತೆಯಲ್ಲಿ ಒಳಚರಂಡಿ ವಿಸ್ತರಣೆ	1,50,000.00
35.	ಶ್ರೀನಿವಾಸ ಪಾಠಶಾಲೆ ಬಳಿ ಒಳಚರಂಡಿ ಸ್ಥಳಾಂತರಿಸುವುದು	1,45,000.00
36.	ಕುದ್ರೋಳಿ ಗುಡ್ಡ ಮ.ನಂ.25-1082ರ ಬಳಿ ಒಳಚರಂಡಿ ಸ್ಥಳಾಂತರಿಸುವುದು	31,000.00
37.	ಬಿಜೈ ಕುಂಟಿಕಾನ ಜಂಕ್ಷನ್ ಬಳಿ ಒಳಚರಂಡಿ ಸ್ಥಳಾಂತರಿಸುವುದು	32,500.00
38.	ಮಠದ ಕಣಿ 3ನೇ ಅಡ್ಡ ರಸ್ತೆಯಲ್ಲಿ ಒಳಚರಂಡಿ ವಿಸ್ತರಣೆ	60,000.00
39.	ಬಿಜೈ ನ್ಯೂ ರೋಡ್ 5ನೇ ಅಡ್ಡ ರಸ್ತೆಯಲ್ಲಿ ಒಳಚರಂಡಿ ವಿಸ್ತರಣೆ	46,000.00
40.	ಕಾಂತಿ ರಾವ್ ಲೇನ್ ಬಳಿ ಒಳಚರಂಡಿ ದುರಸ್ಥಿ	52,000.00
41.	ಬರ್ಕೆಯಲ್ಲಿ ಮ.ನಂ. 6.11.448ರ ಬಳಿ ಒಳಚರಂಡಿ ವಿಸ್ತರಣೆ	22,000.00
42.	ಪಳ್ನೀರು ವಿಶ್ವಕೀರ್ತಿ ಕಟ್ಟಡದ ಬಳಿ ಒಳಚರಂಡಿ ವಿಸ್ತರಣೆ	29,000.00
43.	ಬೋಳಾ ಮಂಗಳಾ ವರ್ಕ್ಸ್‌ಷಾಪ್ ಬಳಿ ಒಳಚರಂಡಿ ವಿಸ್ತರಣೆ	25,000.00
44.	ಅತ್ತಾವರ ನ್ಯೂ ರೋಡ್ ಕಟ್ಟಡ ನಂ. 17.10.623ರ ಬಳಿ ಕೊಳವೆ ವಿಸ್ತರಣೆ	63,000.00
45.	ಲೋವರ್ ಬೆಂದೂರು 3ನೇ ಅಡ್ಡ ರಸ್ತೆಯಲ್ಲಿ ಒಳಚರಂಡಿ ವಿಸ್ತರಣೆ	75,000.00
46.	ಕುದ್ರೋಳಿ ಗುಡ್ಡ ಮನೆ ನಂ. 25.1.25:2ರ ಬಳಿ	98,500.00
47.	ವೆನ್‌ಲ್ಯಾಕ್ ಆಸ್ಪತ್ರೆ ಬಳಿ ಹೆಚ್ಚುವರಿ ವ್ಯಾಸದ ಕೊಳವೆ ವಿಸ್ತರಣೆ	1,37,000.00
48.	ಶ್ರೀನಿವಾಸ ಪಾಠಶಾಲೆ ಟ್ಯಾಂಕ್ ಕಾಲೋನಿ ಬಳಿ ಒಳಚರಂಡಿ ವಿಸ್ತರಣೆ	82,000.00
49.	ಟಿ.ಟಿ. ರಸ್ತೆಯಲ್ಲಿ ಒಳಚರಂಡಿ ಪಿ.ವಿ.ಸಿ. ಕೊಳವೆ ವಿಸ್ತರಣೆ	85,000.00
50.	ಡಿ.ಸಿ.ಯಂ. ಕಾಲೋನಿ ಬಿಜೈಯಲ್ಲಿ ಒಳಚರಂಡಿ ವಿಸ್ತರಣೆ	39,000.00
51.	ದುರ್ಗ ಮಹಲ್‌ಬಳಿ ಗಣಪತಿಯ್ಯ ಲೇನ್‌ನಲ್ಲಿ ಒಳಚರಂಡಿ ವಿಸ್ತರಣೆ	35,000.00
52.	ಮಹಾನಗರಪಾಲಿಕೆ ಕಛೇರಿ ಆವರಣದೊಳಗೆ ಒಳಚರಂಡಿ ವಿಸ್ತರಣೆ	80,000.00
53.	ಮಠದ ಕಣಿ ರಸ್ತೆಯಲ್ಲಿ ಅಜಂತಾ ಅಪಾರ್ಟ್‌ಮೆಂಟ್ ಬಳಿ ಒಳಚರಂಡಿ ವಿಸ್ತರಣೆ	1,15,000.00
54.	ಮಂಗಳೂರು ಸರಕಾರಿ ವೆನ್‌ಲಾಕ್ ಆಸ್ಪತ್ರೆ ಬಳಿ ಒಳಚರಂಡಿ ವಿಸ್ತರಣೆ	2,00,000.00
55.	ಕೊಟ್ಟಾ ಶಾಲೆ ಹಿಂಬದಿಯಲ್ಲಿ ಒಳಚರಂಡಿ ವಿಸ್ತರಣೆ	1,00,300.00
56.	ಜೆಪ್ಪು ಓಣಿಕೆರೆ ಬಳಿ ಒಳಚರಂಡಿ ವಿಸ್ತರಣೆ	1,00,000.00
57.	ಸಂತೊರ ಬಸ್‌ಸ್ಟಾಪ್ ಬಳಿ ಒಳಚರಂಡಿ ಸ್ಥಳಾಂತರಿಸುವುದು	1,00,000.00
58.	ಚಿಲಂಬಿ ಗುಡ್ಡ ಮ.ನಂ.2.7.520:16 ಇಲ್ಲಿಂದ 2.7.520ರ ತನಕ	1,50,000.00
59.	ಅಶೋಕನಗರ ಸುಂಕದ ಕಟ್ಟೆಯಲ್ಲಿ ಒಳಚರಂಡಿ ವಿಸ್ತರಣೆ	1,40,000.00

1	2	3
60.	ಕುದ್ರೋಣಿ ನಾರಾಯಣ ಗುರು ದೇವಸ್ಥಾನ ಬಳಿ ಒಳಚರಂಡಿ ವಿಸ್ತರಣೆ	70,000.00
61.	ಬಿಜೈ ನ್ಯೂ ರೋಡ್ ಮ.ನಂ.2-10-813 ಇಲ್ಲಿಂದ 2-10-812ರ ತನಕ	1,30,000.00
62.	ಮೆ: ತಿಯೋವೆಲ್ ಸರ್ವೆ ಇವರಿಗೆ ಪಾವತಿಸಿದ ಬಾಬ್ತು	20,00,000.00
63.	ವೆಟ್‌ವೆಲ್ ನಂ.5 ಕಾಂಡೇಶ್ವರ ಇದಕ್ಕೆ 2 ಹೊಸ ಸಬ್‌ಮರ್ಸಿಬಲ್ ಪಂಪು ಅಳವಡಿಸಲು	9,00,000.00
64.	ವೆಟ್‌ವೆಲ್ ನಂ. 4 ಕಂಡತ್ತಪಳ್ಳಿ ಇದಕ್ಕೆ 2 ಹೊಸ ಸಬ್‌ಮರ್ಸಿಬಲ್ ಪಂಪು	9,00,000.00
65.	ವೆಟ್‌ವೆಲ್ 1 ಸುಲ್ತಾನ್ ಬತ್ತೇರಿ ಇದಕ್ಕೆ 2ಹೊಸ ಸಬ್‌ಮರ್ಸಿಬಲ್ ಪಂಪು	9,00,000.00
66.	ವೆಟ್‌ವೆಲ್ 5 ಇದಕ್ಕೆ ಹೊಸ ಜನರೇಟರ್ ಖರೀದಿಸಿದ ಬಾಬ್ತು	5,00,000.00
67.	ಒಳಚರಂಡಿ ಸೆಸ್‌ಪೂಲ್ ಎಂಪ್ಟಿಯರ್ ವಾಹನ ಖರೀದಿಸಿದ ಬಾಬ್ತು	8,00,000.00
68.	ಸಮಗ್ರ ನೀರು ಸರಬರಾಜು ಯೋಜನೆ ಕರ್ನಾಟಕ ನಗರ ನೀರು ಸರಬರಾಜು	55,00,000.00
69.	ಸಿಗ್ನಲ್ ಮತ್ತು ಚಂಪನಕಟ್ಟಾ ಇಲ್ಲಿಂದ ಶ್ರೀನಿವಾಸ ಪಾಠಶಾಲೆ ತನಕ	7,50,000.00
70.	2 ಸಂಖ್ಯೆ ಟ್ರೀಟ್‌ಮೆಂಟ್‌ಗಳ ದುರಸ್ತಿ ಕೆಲಸ	10,00,000.00
71.	ಶ್ರೀನಿವಾಸ ಪಾಠಶಾಲೆಯಿಂದ ದುಕ್ರೋಳಿ ಮಾರ್ಕೆಟ್ ತನಕ ಒಳಚರಂಡಿ	15,50,000.00
72.	ಡಾ। ಸಬಿತಾ ಇವರ ಮನೆಯಿಂದ ವೆಟ್‌ವೆಲ್ ನಂ. 3ರ ತನಕ ಒಳಚರಂಡಿ	6,00,000.00
73.	ಒಂದು ಟಿಪ್ಪರ್ ಖರೀದಿ ಅರವಿಂದ ಮೋಟಾರ್ಸ್ ಮುಖಾಂತರ	6,76,720.00
74.	ಕೊಡಿಯಾಲ್ ಬೈಲಿನಲ್ಲಿ ಅಂಬೇಡ್ಕರ್ ಭವನ ನಿರ್ಮಾಣ	10,00,000.00
75.	ವಿಪ್ರೋ ಸಂಸ್ಥೆಯಿಂದ ಕಂಪ್ಯೂಟರ್ ಖರೀದಿ	4,50,000.00
76.	2 ಹಂಪರ್ ಪ್ಲೇಸರ್ ಮತ್ತು 5 ಕಂಟೈನರ್ ಖರೀದಿ	10,00,000.00
77.	1 ಹಂಪರ್ ಪ್ಲೇಸರ್ ಮತ್ತು 5 ಕಂಟೈನರ್ ಖರೀದಿಗೆ	3,50,000.00
78.	ಮಹಾನಗರ ಪಾಲಿಕೆ ಆಡಳಿತ ಕಛೇರಿ ಪಕ್ಕದಲ್ಲಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕೆ	15,00,000.00
79.	ಒಳಚರಂಡಿ ವ್ಯವಸ್ಥೆಯ ನಿರ್ವಹಣೆ ಮತ್ತು ದುರಸ್ತಿ	36,34,902.00

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಪ್ರಮುಖ ಕ್ಷೇತ್ರದಲ್ಲಿ ನೀರಿನ ಲ್ಯಾಬರೇಟರಿ ಟೆಸ್ಟ್ ಮಾಡುವಾಗ, ಮಲಿನ ಅಂಶವನ್ನೊಳಗೊಂಡ ನೀರು ಮತ್ತೆ ಕುಡಿಯುವ ನೀರು ಒಂದಾಗಿರುವಂಥದ್ದು ಅನೇಕ ಕಡೆಗಳಲ್ಲಿ ಕಂಡು ಬಂದಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮ್ಯಾನ್‌ಹೋಲ್‌ನಲ್ಲಿ ಕುಡಿಯುವ ನೀರಿನ ಪೈಪ್ ಮತ್ತು ಡ್ರೈನೇಜ್ ಪೈಪ್ ಹತ್ತಿರ

ಹತ್ತಿರವಾಗಿ ಹೋಗಿರುವಂಥಾದ್ದು ಕೊರೇಷನ್ ಆಗಿ ಅವು ಒಂದಕ್ಕೆ ಒಂದು ಸೇರಿಕೊಂಡಿರುವಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮಂಗಳೂರು ಕಾರ್ಪೊರೇಷನ್‌ನಲ್ಲಿ ಡ್ರೈನೇಜ್ ಸೆಸ್ ಅನ್ನು ನಾಲ್ಕು ವರ್ಷಗಳಲ್ಲಿ ನಾಲ್ಕು ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡಿದ್ದೇವೆ. ಅದರಲ್ಲಿ ಎರಡು ಕೋಟಿ ತೊಂಬತ್ತೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನೀರು ಮತ್ತು ಡ್ರೈನೇಜಿನದು ಏನು ಸಮಸ್ಯೆಯಾಗಿತ್ತು, ಅದನ್ನು 1997ರಲ್ಲಿ ತೆಗೆದುಕೊಂಡಿದ್ದು, ಈ ಕೆಲಸವನ್ನು ನಾವು ಕಂಪ್ಲೀಟ್ ಮಾಡಿದ್ದೇವೆ. ಇನ್ನು ಕೆಲವು ಕೆಲಸಗಳು ಪ್ರೋಗ್ರೆಸ್‌ನಲ್ಲಿದೆ. ಇನ್ನು ಒಂದು ಕೋಟಿ ತೊಂಭತ್ತೈದು ಲಕ್ಷ ರೂಪಾಯಿಗಳು ಉಳಿದಿದೆ. ಈ ಹಣವನ್ನು ಪೂರ್ತಿ ಒಂದೇ ಸಲ ಖರ್ಚು ಮಾಡಬಾರದೆಂದು ಕೌನ್ಸಿಲಿನಲ್ಲಿರುವುದರಿಂದ ನಾವು ಅದನ್ನು ಖರ್ಚು ಮಾಡಿಲ್ಲ. 39.10 ಕೋಟಿಯ ಪ್ರಾಜೆಕ್ಟ್ ಕಂಪ್ಲೀಟ್ ಆಗಿದೆ, ಇವತ್ತು ಅದರ ಮೀಟಿಂಗ್ ಕರೆದಿದ್ದೇವೆ. ಈ ಪ್ರಾಜೆಕ್ಟ್ ಕಂಪ್ಲೀಟ್ ಆದಮೇಲೆ ಇಂತಹ ಸಮಸ್ಯೆಗಳು ಏನಿವೆ, ಅದನ್ನು ಪರಿಹಾರ ಮಾಡಬೇಕೆಂದು ಪ್ರೋಗ್ರಾಂ ಹಾಕಿಕೊಂಡಿದ್ದೇವೆ. ಇನ್ನು ಒಂದು ಕೋಟಿ ತೊಂಭತ್ತೈದು ಲಕ್ಷ ರೂಪಾಯಿಗಳಲ್ಲಿ ಮೇಜರ್ ವರ್ಕ್‌ಗಳು repairing and upgrading of existing treatment plant and replacing new pumpset. ಕೆಲಸಗಳನ್ನು ತೆಗೆದುಕೊಂಡಿದ್ದೇವೆ, ಆ ಕೆಲಸ ಮುಗಿಯಬೇಕೆಂದರೆ ಇನ್ನು ಒಂದು ವರ್ಷವಾಗುತ್ತದೆ. ಈ ಕೆಲಸವೂ ಪೂರ್ತಿಯಾದರೆ ಈಗಿರುವಂತಹ ಸಮಸ್ಯೆ ಸಾಲ್ವ್ ಆಗುತ್ತದೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ಬಂದಿರುವಂತಹ ಪ್ರಶ್ನೆ ಏನೆಂದರೆ, 4,82,81,221 ರೂಪಾಯಿಗಳು ಸಂಗ್ರಹವಾಗಿದೆ ಇದನ್ನು ಡ್ರೈನೇಜ್ ಸೆಸ್‌ನಿಂದ ಸಂಗ್ರಹ ಮಾಡಲಾಗಿದೆ ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಮಹಾನಗರಪಾಲಿಕೆಯ ಆಡಳಿತ ಕಛೇರಿಯ ಭಾಗದಲ್ಲಿ ವಾಣಿಜ್ಯ ಕಟ್ಟಡದ ನಿರ್ಮಾಣಕ್ಕೆ ಹದಿನೈದು ಲಕ್ಷ ರೂಪಾಯಿಗಳು, ಎರಡು ಹಂಪರ್ ಪ್ಲೇಸರ್‌ಗೆ ಹದಿಮೂರುವರೆ ಲಕ್ಷ ರೂಪಾಯಿಗಳು ಬೇರೆ ಬೇರೆ ಯೋಜನೆಗೆ ಸಮಗ್ರ ನೀರು ಸರಬರಾಜು ಯೋಜನೆಗೆ ಐವತ್ತೈದು ಲಕ್ಷ ರೂಪಾಯಿಗಳು ಖರ್ಚಾಗಿದ್ದು, ಸುಮಾರು ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು ವೆಚ್ಚ ಮಾಡಲು ಡ್ರೈನೇಜ್ ಸೆಸ್ ಸಂಗ್ರಹವಾಗಿರುವಂಥಾದ್ದನ್ನು ಬೇರೆಯದಕ್ಕೆ ಖರ್ಚು ಆಗಿದೆ. ಅದನ್ನು ಬೇರೆ ಕಡೆಯಿಂದ ಸಂಗ್ರಹ ಮಾಡಿ ಡ್ರೈನೇಜ್‌ಗೆ ಖರ್ಚು ಮಾಡುವಂಥಾದ್ದರ ಬಗ್ಗೆ ತಾವು ಆದೇಶವನ್ನು ಕೊಡುತ್ತೀರಾ ? ಏಕೆಂದರೆ ಒಂದು ಸೆಸ್‌ನಲ್ಲಿ ಸಂಗ್ರಹವಾದಂಥ ಹಣವನ್ನು ಬೇರೆಯದಕ್ಕೆ ಉಪಯೋಗ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಇದರ ಬಗ್ಗೆ ಸ್ಪಷ್ಟವಾದಂತಹ ನಿರ್ದೇಶನ ಕೊಡಬೇಕೆಂದು ಆಗ್ರಹ ಪಡಿಸುತ್ತೇನೆ. ಇನ್ನು ಕನಿಷ್ಟ ಮೆಂಟೇನೆನ್ಸ್‌ಗೆ ಸಂಬಂಧಪಟ್ಟ ಹಾಗೆ ಎ.ಡಿ.ಬಿ.ಯಿಂದ ಬಂದ ಮೂವತ್ತೆಂಟು ಕೋಟಿ ರೂಪಾಯಿಗಳು ಏನಿವೆ, ಅದನ್ನು ಇನ್ನು ಒಂದು ವರ್ಷದಲ್ಲಿಯಾದರೂ ಕಾರ್ಯರೂಪಕ್ಕೆ ಬರುವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೀರಾ ? ಮತ್ತೆ ಬಾಕಿ ಇರುವಂತಹ ಒಂದು ಕೋಟಿ ತೊಂಭತ್ತು ಎಂಟು ಲಕ್ಷ ರೂಪಾಯಿಗಳನ್ನು ತುರ್ತು ಕೆಲಸಗಳು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಉಪಯೋಗ ಮಾಡುವಂಥಾದ್ದಕ್ಕೆ ತಾವು ಆದೇಶವನ್ನು ಕೊಡುತ್ತೀರಾ ? ಈ ಮೂರು ಪ್ರಶ್ನೆಗಳಿಗೆ ತಾವು ಉತ್ತರವನ್ನು ನೀಡಬೇಕಾಗಿ ಕೋರುತ್ತೇನೆ.

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಈಗ ನಾಲ್ಕು ಕೋಟಿ ರೂಪಾಯಿಗಳು ಏನಿವೆ, ಅದರಲ್ಲಿ ಎರಡು ಕೋಟಿ ತೊಂಭತ್ತೈದು ಲಕ್ಷ ರೂಪಾಯಿಗಳನ್ನು ನಾವು ಡ್ರೈನೇಜಿಗೆ ಖರ್ಚು ಮಾಡಿದ್ದೇವೆ. ತಮಗೆ ಅದರ ಪಟ್ಟಿಯನ್ನು ಈಗಾಗಲೇ ಕೊಟ್ಟಿದ್ದೇವೆ. ಇನ್ನು ಬೇರೆ ವಿಚಾರಗಳು ಏನಿವೆ, ಅದರ ಬಗ್ಗೆ ಎ.ಡಿ.ಬಿ. ಮೀಟಿಂಗ್ ಅನ್ನು ಇವತ್ತು ಮಾಡುತ್ತಿದ್ದೇವೆ. ಈ ವಿಷಿಯಾ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ಏನು ಪ್ರಾಜೆಕ್ಟ್ ಆಗುತ್ತಿದೆ ಅದೆಲ್ಲಾ ಕ್ಲಿಯರ್ ಆದಮೇಲೆ ನಾವು ಟೆಂಡರ್ ಕರೆದು ಕೆಲಸವನ್ನು ಮಾಡುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಈಗ ಉಳಿದಿರುವಂತಹ ಡ್ರೈನೇಜ್ ಸೆಸ್ ಅನ್ನು ಏನು ಮಾಡುತ್ತೀರಾ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ : ಈ ಒಂದು ಕೋಟಿ ತೊಂಭತ್ತೆಂಟು ಲಕ್ಷ ರೂಪಾಯಿಗಳಿಗೆ ವಾಟರ್ ಸಪ್ಲೈಗೆ ಎಂದು ಸಪರೇಟಾಗಿ ಮಾಡಿದ್ದೇವೆ. ನಾವು ಡ್ರೈನೇಜ್‌ಗೆ ಒಂದು ಕೋಟಿ ತೊಂಭತ್ತೈದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಹುಬ್ಬಳ್ಳಿಗೆ ತಹಶೀಲ್ದಾರರ ಕಛೇರಿ

401 -ಶ್ರೀ ಅಶೋಕ್ ಶಂಕರ್ ಕಾಟ್ವೆ (ಹುಬ್ಬಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ ನಗರಕ್ಕೆ ಬೆಂಗಳೂರು ನಗರದಂತೆ ಹುಬ್ಬಳ್ಳಿ ನಗರ ಹಾಗೂ ಗ್ರಾಮೀಣಕ್ಕೆ ಪ್ರತ್ಯೇಕ ತಹಶೀಲ್ದಾರ್ ಕಾರ್ಯಾಲಯಗಳನ್ನು ತೆರೆಯುವುದು ಸರ್ಕಾರದ ಗಮನದಲ್ಲಿದೆಯೇ?*

ಆ) *ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಹೌದು.

ಆ) ವಿಷಯ ಪರಿಶೀಲನೆಯಲ್ಲಿದೆ.

ಶ್ರೀ ಅಶೋಕ್ ಶಂಕರ್ ಕಾಟ್ವೆ : ಮಾನ್ಯ ಕಂದಾಯ ಸಚಿವರನ್ನು ನಾನು ಈ ಪ್ರಶ್ನೆ ಕೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಾಹುಕಾರ್ ಬಸಪ್ಪ ನವರ ವೇಷವನ್ನು ಧರಿಸಿ ಸಭೆಗೆ ಆಗಮಿಸಿದರು)

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಯಾರೋ ಸದಸ್ಯರಲ್ಲದೆ ಇರುವವರು ಈ ಸಭೆಯ ಒಳಗಡೆ ಬಂದರೆ ಹೇಗೆ? ತಾವು ಗೇಟ್‌ನಲ್ಲಿರುವ ಸೆಕ್ಯೂರಿಟಿಯವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು. ಇದು ಜಿಲ್ಲಾ ಪಂಚಾಯತ್ ಆಗಿಬಿಟ್ಟಿದೆ, ಇಲ್ಲಿಗೆ ಅಪರಿಚಿತರೆಲ್ಲಾ ಬರುವ ಹಾಗೆ ಆದರೆ ಹೇಗೆ?